(ಮಧ್ಯಂತರ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)
**ಪಾಟೀ ಸವಾಲುಃ ಶ್ರೀ ಎಂ.ಎಂ. 1 ರಿಂದ 6 ನೇ ಆರೋಪಿತರ ಪರ ವಕೀಲರಿಂದ**

ನಾನು 9 ನೇ ತರಗತಿಯವರೆಗೂ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನಾನು ಪಟೇಲ್ ಕಾಳೀರೇಗೌಡನದೊಡ್ಡಿ ಗ್ರಾಮದಲ್ಲಿ ಸುಮಾರು 25 ರಿಂದ 30 ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ ಮಾಡಿಕೊಂಡಿರುತ್ತೇವೆ. ಅದಕ್ಕೂ ಮೊದಲು ನಾನು ತೋಟಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ತೋಟಹಳ್ಳಿ ಗ್ರಾಮದಿಂದ ಕಾಳೀರೇಗೌಡನದೊಡ್ಡಿ ಗ್ರಾಮಕ್ಕೆ ಸುಮಾರು 4 ರಿಂದ 5 ಫರ್ಲಾಂಗ್ ದೂರವಾಗುತ್ತದೆ. ಹಾಲೀ ವಾಸವಾಗಿರುವ ಮನೆಯ ಸ್ವಲ್ಪ ದೂರದ ಸುತ್ತುಮುತ್ತಲಿನಲ್ಲಿ ವಾಸದ ಮನೆಗಳು ಇರುತ್ತವೆ. ಸಾತನೂರು-ಕನಕಪುರಕ್ಕೆ ಹೋಗುವ ರಸ್ತೆಯಲ್ಲಿ ಒಂಟಿ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ನನ್ನ ಅಳಿಯ ಚಾಸಾ-2 ರವರು ಇನ್ಫೋಸಿಸ್‌ನಲ್ಲಿ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ನನ್ನ ಅಳಿಯ ಚಾಸಾ-2 ರವರು ಸುಮಾರು 5 ವರ್ಷಗಳ ಹಿಂದೆ ನನ್ನ ಮಗಳನ್ನು ಮದುವೆಯಾಗಿರುತ್ತಾರೆ. ನನ್ನ ತಮ್ಮ ಚಾಸಾ-3 ರವರು ವ್ಯವಸಾಯ ಮಾಡಿಕೊಂಡು ತೋಟಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನನ್ನ ಮಗ ಚಾಸಾ-4 ರವರಿಗೆ ಒಂದು ಕಣ್ಣಿನ ದೃಷ್ಟಿ ದೋಷವಿರುವುದರಿಂದ ಮನೆಯಲ್ಲಿಯೇ ಇರುತ್ತಾನೆ. ಚಾಸಾ-5 ರವರು ನನ್ನ ಕೊನೆಯ ಮಗ. ಅವನು ವ್ಯವಸಾಯ ಮಾಡಿಕೊಂಡು ಮನೆಯಲ್ಲಿ ಇರುತ್ತಾನೆ. ನಮಗೆ ಸೇರಿದ 28 ರಿಂದ 30 ಎಕರೆ ಜಮೀನು ಇರುತ್ತದೆ. ಚಾಸಾ-6 ರವರು ನನ್ನ ಮಗಳು. ನನ್ನ ಮಗಳು ಬೆಂಗಳೂರಿನಲ್ಲಿ ವಾಸಮಾಡಿಕೊಂಡಿರುತ್ತಾರೆ. ಅವಳು ಪದವಿಧರೆ. ಚಾಸಾ-7 ರವರು ನನ್ನ ತಮ್ಮ. ಅವರಿಗೆ ತೋಟಹಳ್ಳಿಯಲ್ಲಿ ಜಮೀನು ಇದ್ದು, ರೇಷ್ಮೇ ಕೃಷಿಯನ್ನು ಮಾಡಿಕೊಂಡು ಕನಕಪುರದಲ್ಲಿ ವಾಸಮಾಡಿಕೊಂಡಿರುತ್ತಾನೆ. ನನಗೆ ಚಾಸಾ-10 ಮತ್ತು 11 ರವರ ಪರಿಚಯವಿರುವುದಿಲ್ಲ. 5 ನೇ ಆರೋಪಿ ಕೇಶವಮೂರ್ತಿ ನನ್ನ ದೊಡ್ಡಪ್ಪನ

ಮಗನಾಗಿದ್ದು, ಮೊದಲು ನಮ್ಮ ಮನೆಯಲ್ಲಿ ವಾಸಮಾಡಿಕೊಂಡಿದ್ದರಿಂದ ನನ್ನ ಯಜಮಾನರು ಅವನ ಮದುವೆಯನ್ನು ಮಾಡಿರುತ್ತಾರೆ. ನನ್ನ ಯಜಮಾನರು ನಿಜಲಿಂಗಪ್ಪರವರ ಗಣಿಗಾರಿಕೆ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದರು. ನಮಗೆ ಸೇರಿದ ಎರಡು ಲಾರಿಗಳು ಚಾಸಾ-4 ರವರ ಹೆಸರಿನಲ್ಲಿರುತ್ತವೆ.

ನಾನು ಚಾಸಾ-4 ರವರಿಗೆ ಸಾತನೂರಿನ ಶಾರದ ವಿದ್ಯಾಸಂಸ್ಥೆಯಲ್ಲಿ ವ್ಯಾಂಸಂಗಕ್ಕೆ ಸೇರಿಸಿರುತ್ತೇನೆ. ಆತನು ಎಸ್ಎಸ್ಎಲ್ಸಿವರೆಗೂ ವ್ಯಾಸಂಗ ಮಾಡಿರುತ್ತಾನೆ. 5 ನೇ ಆರೋಪಿಯ ಹೆಂಡತಿ ಹೆಸರು ಇಂದ್ರಮ್ಮ (ಆರೋಪಿ-6). ಅವರು ಕೆಮ್ಮಾಳೆ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಆರೋಪಿ-1 ರಿಂದ 4 ರವರು ನನ್ನ ಸಂಬಂಧಿಕರು ಅಲ್ಲ ಎಂದರೆ ಸರಿ. ಚಾಸಾ-4 ರವರು ವ್ಯಾಂಸಗ ಮಾಡುತ್ತಿರುವ ಸಮಯದಲ್ಲಿ ಆತನಿಗೆ ಮೊಬೈಲ್ ಕೊಡಿಸಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. 3 ನೇ ಆರೋಪಿಯು ಚಾಸಾ-4 ರವರೊಂದಿಗೆ ಶಾರಧ ವಿದ್ಯಾಸಂಸ್ಥೆಯಲ್ಲಿ ವ್ಯಾಂಸಗ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 3 ನೇ ಆರೋಪಿಯು ಶಾರದ ವಿದ್ಯಾಸಂಸ್ಥೆಯಲ್ಲಿ ತನ್ನ ವ್ಯಾಸಂಗವನ್ನು ಮುಗಿಸಿ ಬೇರೆ ವಿದ್ಯಾಸಂಸ್ಥೆಯಲ್ಲಿ ವ್ಯಾಂಸಗ ಮಾಡುತ್ತಿರುವ ಸಮಯದಲ್ಲಿ ಚಾಸಾ-4 ಕೌಶಿಕ್ರವರು 3 ನೇ ಆರೋಪಿಗೆ ಮೊಬೈಲ್ ಮೂಲಕ ಫೋನ್ ಮಾಡುವುದು ಮತ್ತು ಸಂದೇಶವನ್ನು ಕಳುಹಿಸುವುದನ್ನು ಮಾಡುತ್ತಿದ್ದ ಎಂದರೆ ಸರಿಯಲ್ಲ. ಚಾಸಾ-4 ರವರು 3 ನೇ ಆರೋಪಿಯನ್ನು ಮದುವೆಯಾಗಿ ಬೆಂಗಳೂರಿನಲ್ಲಿ ಬೇರೆ ಮನೆ ಮಾಡಿ ಇಟ್ಟಿದ್ದ ಎಂದರೆ ಸರಿಯಲ್ಲ.

ಚಾಸಾ-4 ರವರು 3 ನೇ ಆರೋಪಿಯನ್ನು ಮದುವೆಯಾದ ನಂತರ 2014 ನೇ ಸಾಲಿನಲ್ಲಿ ತನಗೆ ಸೇರಿದ ಬ್ಯಾಂಕ್ ಖಾತೆಯಿಂದ ಆರೋಪಿ-3 ರವರಿಗೆ ಮಾಸಿಕ ಜೀವನಾಂಶವನ್ನು ನೀಡುತ್ತಿದ್ದ ಎಂದರೆ ಸಾಕ್ಷಿಯು ಆತನ ಬ್ಯಾಂಕ್ ಎಟಿಎಂ ಕಾರ್ಡ್ ಕಳೆದು ಹೋಗಿದ್ದು, ಚಾಸಾ-4 ರವರು ಆರೋಪಿ-3 ರವರಿಗೆ ಯಾವುದೇ ಮಾಸಿಕ ಜೀವನಾಂಶವನ್ನು

ನೀಡುತ್ತಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಯಜಮಾನರಿಗೆ ಕ್ಯಾನ್ಸರ್ ಖಾಯಿಲೆ ಬಂದಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನಾನು ಚಾಸಾ-4 ರವರಿಗೆ ಫೋನ್ ಮಾಡಿ 3 ನೇ ಆರೋಪಿಯೊಂದಿಗೆ ಮದುವೆ ಮಾಡಿಕೊಡುವುದಾಗಿ ಹೇಳಿ ಬೆಂಗಳೂರಿನಿಂದ ವಾಪಸ್ ಕರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಚಾಸಾ-4 ರವರನ್ನು ವಾಪಸ್ ಬೆಂಗಳೂರಿಗೆ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ರತ್ನಮ್ಮ 3 ನೇ ಆರೋಪಿಗೆ ಬೇರೆ ಮದುವೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವಿಚಾರ ನನಗೆ ತಿಳಿದಿರುವುದಿಲ್ಲವೆಂದು ಸಾಕ್ಷಿ ನುಡಿಯುತ್ತಾರೆ. ನಂತರ ಚಾಸಾ-4 ರವರು 3 ನೇ ಆರೋಪಿಯೊಂದಿಗೆ ಜಗಳ ಮಾಡಿ, 3 ನೇ ಆರೋಪಿಗೆ ವಿವಾಹ ವಿಚ್ಛೇದನ ಮಾಡಿಕೊಳ್ಳುವಂತೆ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-4 ರವರು 3 ನೇ ಆರೋಪಿಯೊಂದಿಗೆ ವಿವಾಹವಾಗಿರುವ ತಿಳಿದಿದ್ದರೂ ಸಹ ಅವರಿಬ್ಬರನ್ನು ಒಟ್ಟಿಗೆ ವಾಸ ಮಾಡಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ದಿ:07.05.2020 ರಂದು ಆರೋಪಿ-1 ರಿಂದ 4 ರವರು ಚಾಸಾ-4 ರವರ ವಿರುದ್ದ ಸಾತನೂರು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸರಿ. ನಂತರ ಪೊಲೀಸ್ ಠಾಣೆಯಲ್ಲಿ ವಿಚಾರಣೆಗೆ ಹಾಜರಾದ ನಂತರ ದೂರು ಮುಕ್ತಾಯಗೊಂಡಿರುತ್ತದೆ. ಸಾತನೂರು ಪೊಲೀಸರು ಬುದ್ಧಿ ಮಾತು ಹೇಳಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಂತೆ ಸಲಹೆ ನೀಡಿರುತ್ತಾರೆ ಎಂದರೆ ಸರಿ. ನಂತರ 3 ನೇ ಆರೋಪಿಯು ಬೆಂಗಳೂರಿನ ಶಿವಶಕ್ತಿ ಮಹಿಳಾ ಸಂಘಕ್ಕೆ ದೂರನ್ನು ನೀಡಿರುವ ವಿಚಾರ ನನಗೆ ತಿಳಿದಿರುವುದಿಲ್ಲ.

ದಿ:09.05.2020 ರಂದು ನಮ್ಮ ಮನೆಯ ಬಳಿ ಶಿವಶಕ್ತಿ ಮಹಿಳಾ ಸಂಘದ ಸದಸ್ಯರು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮನೆಯ ದಕ್ಷಿಣ ಹಾಗೂ ಪಶ್ಚಿಮ ದಿಕ್ಕಿಗೆ ಎರಡು ಗೇಟುಗಳು ಇರುತ್ತವೆ ಎಂದರೆ ಸರಿ. ನಮ್ಮ ಮನೆಯ ಆವರಣದಲ್ಲಿ ಸಿಸಿ ಕ್ಯಾಮರಾವನ್ನು

ಅಳವಡಿಸಿರುವುದಿಲ್ಲ. ನಮ್ಮ ಮನೆಯ ದೊಡ್ಡ ಗೇಟಿನ ಬಳಿ ವಾಹನವನ್ನು ನಿಲ್ಲಿಸಲು ಮೇಲ್ಛಾವಣಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

ದಿಃ09.05.2020 ರಂದು ಕೋವಿಡ್ ಸಾಂಕ್ರಮಿಕ ರೋಗದ ಪರಿಣಾಮವಾಗಿ ನಮ್ಮ ಮನೆಯ ಎರಡೂ ಗೇಟುಗಳಿಗೆ ಬೀಗವನ್ನು ಹಾಕಿಕೊಂಡಿರುತ್ತೇವೆ ಎಂದರೆ ಸರಿ.

ದಿಃ09.05.2020 ರಂದು 3 ನೇ ಆರೋಪಿಯು ನಮ್ಮ ಮನೆಯ ಬಳಿ ಬಂದು ಚಾಸಾ-4 ರವರನ್ನು ನಮ್ಮ ಜೊತೆ ಕಳುಹಿಸಿಕೊಡಿ ಎಂದು ಕೇಳಿಕೊಂಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಆರೋಪಿ-3 ರವರು ಚಾಸಾ-4 ರವರನ್ನು ಅಪಹರಿಸಿಕೊಂಡು ಹೋಗುತ್ತೇವೆಂದು ಹೇಳಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಆ ಸಮಯದಲ್ಲಿ ಚಾಸಾ-4 ರವರು ಮನೆಯ ಒಳಗೆ ಇದ್ದನು. ಆ ಸಮಯದಲ್ಲಿ ನಾನು, ಚಾಸಾ-2 ಮತ್ತು 3 ರವರು ಆರೋಪಿತರೊಂದಿಗೆ ಗುಂಡಾವರ್ತನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬೆಂಗಳೂರಿನ ಶಿವಶಕ್ತಿ ಮಹಿಳಾ ಸಂಘದ ಸದಸ್ಯರು ನಮಗೆ ಬುದ್ಧಿ ಮಾತನ್ನು ಹೇಳಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ಆರೋಪಿತರಿಗೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಸಾತನೂರು ಪೊಲೀಸ್ ಠಾಣೆಗೆ ಸುಮಾರು 3 ಕಿಲೋ ಮೀಟರ್ ದೂರವಾಗುತ್ತದೆ. ಗಲಾಟೆಯು ಮಧ್ಯಾಹ್ನ 1 ರಿಂದ 1-30 ಗಂಟೆ ಸಮಯದಲ್ಲಿ ನಡೆದಿರುತ್ತದೆ. ಗಲಾಟೆ ನಡೆಯಿತೆಂದು ಹೇಳಲಾದ ಸಮಯದಲ್ಲಿ ಮನೆಯ ಒಳಭಾಗದ ಅಲ್ಲಲ್ಲಿ ರಕ್ತದ ಕಲೆಗಳು ಬಿದ್ದಿರುತ್ತವೆ. ಚಾಸಾ-2 ರವರು ಧರಿಸಿದ್ದ ಬಟ್ಟೆಯ ಬಲಭಾಗದಲ್ಲಿ ರಕ್ತವು ಹರಿದಂತೆ ಕಲೆಯಾಗಿರುತ್ತದೆ. ಚಾಸಾ-3 ರವರಿಗೆ 4 ನೇ ಆರೋಪಿಯ ಕಬ್ಬಿಣದ ರಾಡಿನಿಂದ ತಲೆಯ ಹಿಂಭಾಗಕ್ಕೆ ಹಲ್ಲೆ ಮಾಡಿದ್ದು, ಆ ಸಮಯದಲ್ಲಿ ಚಾಸಾ-3 ರವರು ಧರಿಸಿದ್ದ ಬಿಳಿ ಬಣ್ಣದ ಬನಿಯನ್ ಹಿಂಭಾಗದಲ್ಲಿ ರಕ್ತದ ಕಲೆಯಾಗಿರುತ್ತದೆ. ನಾನು ಅದೇ ದಿನ ಸಂಜೆ 7-00 ಗಂಟೆಗೆ ಸಾತನೂರು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಸಾತನೂರಿನಲ್ಲಿ ಪ್ರಾಥಮಿ ಆರೋಗ್ಯ ಕೇಂದ್ರ

ಇರುತ್ತದೆ ಎಂದರೆ ಸರಿ. ಚಾಸಾ-2 ಮತ್ತು 3 ರವರನ್ನು ನಾನು, ಚಾಸಾ-4 ರಿಂದ 6 ಹಾಗೂ ಸೀತಾರಾಮೇಗೌಡರವರು ಕನಕಪುರದ ಮೇಳೆಕೋಟೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತೇವೆ. ನಮ್ಮ ಮನೆಯಿಂದ ಕನಕಪುರ ಸರ್ಕಾರಿ ಆಸ್ಪತ್ರೆಗೆ ಸುಮಾರು 15 ಕಿಲೋ ಮೀಟರ್ ದೂರವಾಗುತ್ತದೆ. ನಾನು ಸದರಿ ಆಸ್ಪತ್ರೆಗೆ ಮಧ್ಯಾಹ್ನ 2-00 ರಿಂದ 2-30 ಗಂಟೆಗೆ ಹೋಗಿ ನಂತರ 3-00 ರಿಂದ 3-30 ಗಂಟೆ ಸಮಯದಲ್ಲಿ ವಾಪಸ್ ಹೋಗಿರುತ್ತೇನೆ. ಆ ಸಮಯದಲ್ಲಿ ನಾನು ಕನಕಪುರ ಟೌನ್ ಪೊಲೀಸ್ ಠಾಣೆಗೆ ದೂರನ್ನು ನೀಡಿರುವುದಿಲ್ಲ. ನಾನು 3-00 ರಿಂದ 3-30 ಗಂಟೆ ಸಮಯಕ್ಕೆ ನಮ್ಮ ಮನೆಗೆ ಹೋಗಿ, ನಂತರ ಅದೇ ದಿನ ಸಂಜೆ 7-00 ಗಂಟೆ ಸಮಯಕ್ಕೆ ಸಾತನೂರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನಿಪಿ-1 ನ್ನು ಸುಗುಣ ಎಂಬುವವರಿಂದ ಹೇಳಿ ಬರೆಯಿಸಿರುತ್ತೇನೆ. ನಾನು ನಿಪಿ-1 ರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಚಾಸಾ-2 ಮತ್ತು 3 ರವರನ್ನು ಕನಕಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿರುವ ಬಗ್ಗೆ ಉಲ್ಲೇಖ ಇರುತ್ತದೆ. ನಾನು ದೂರು ನೀಡಿದ ಮರುದಿವಸ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಕ್ರಮ ಜರುಗಿಸಿ ಒಡೆದ ಕಿಟಕಿ ಗಾಜಿನ ಚೂರುಗಳು, ಡ್ರಾಗನ್, ಚಾಕು, ರಾಡು, ಕಲ್ಲು, ಕೆಎ-02-ಎಂಜಿ-4986 ಇನ್ನೋವಾ ಕಾರನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಕಾರು ನಮ್ಮ ಮನೆಯ ಮುಂಭಾಗದಲ್ಲಿ ನಿಂತಿತ್ತು. ನಾನು ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ನಮ್ಮ ಮನೆಯಲ್ಲಿ ಬಿದ್ದಿದ್ದ ರಕ್ತದ ಕಲೆಗಳನ್ನು ತೋರಿಸಿರುತ್ತೇನೆ. ಘಟನೆ ನಡೆಯಿತೆಂದು ಹೇಳಲಾದ ಸಮಯದಲ್ಲಿ ನಾನು 2 ನೇ ಆರೋಪಿಯಿಂದ ಮೊಬೈಲ್ ಕಸಿದುಕೊಂಡು ನನ್ನ ಬಳಿ ಇಟ್ಟುಕೊಂಡಿರುತ್ತೇನೆಂದರೆ ಸರಿಯಲ್ಲ. ಈಗಲೂ ಸಹ ಸದರಿ ಮೊಬೈಲ್ ನನ್ನ ಬಳಿಯೇ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ-4 ರವರು ಚಾಸಾ-3 ರವರಿಗೆ ಚಾಕು, ಕಬ್ಬಿಣದ ರಾಡು, ಕಲ್ಲಿನಿಂದ ಹಲ್ಲೆ ಮಾಡಿದ್ದು, ಸದರಿ ವಸ್ತುಗಳ ಮೇಲೆ ರಕ್ತಕಲೆಯಾಗಿರುತ್ತದೆ. ಈ ಹಂತದಲ್ಲಿ ಸಾಕ್ಷಿಗೆ ಎಂಒ-5 ರಿಂದ 7

ಮುದ್ದೆಮಾಲುಗಳನ್ನು ತೋರಿಸಿ, ಅದರಲ್ಲಿ ರಕ್ತದ ಕಲೆ ಇರುವಿಕೆ ಬಗ್ಗೆ ಸಾಕ್ಷ್ಯ ನುಡಿಯಲು ಸೂಚಿಸಿದಾಗ ಸಾಕ್ಷಿಯು ಆ ಸಮಯದಲ್ಲಿ ರಕ್ತದ ಕಲೆ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗೆ ಎಂಒ-2 ಬನಿಯನ್ ತೋರಿಸಿ ಅದರ ಮೇಲೆ ರಕ್ತದ ಕಲೆ ಇರುವಿಕೆಯ ಬಗ್ಗೆ ಸಾಕ್ಷ್ಯ ನುಡಿಯಲು ಸೂಚಿಸಿದಾಗ ಸಾಕ್ಷಿಯು ಎಂಒ-2 ಬನಿಯನ್ ಹಿಂಭಾಗದಲ್ಲಿರುವ ರಕ್ತದ ಕಲೆಯನ್ನು ನೋಡಿ ಗುರುತಿಸಿರುತ್ತಾರೆ. ಆಗ ಆರೋಪಿತರ ಪರ ವಕೀಲರು ಅದು ರಕ್ತದ ಕಲೆ ಅಲ್ಲ ದೂಳು ಎಂದು ಸೂಚಿಸಿದಾಗ ಸಾಕ್ಷಿಯು ಅದನ್ನು ಅಲ್ಲಗೆಳೆದಿರುತ್ತಾರೆ. ಸಾಕ್ಷಿಗೆ ಎಂಒ-1 ಕಪ್ಪು ಬಣ್ಣದ ಟಿಶರ್ಟನ್ನು ತೋರಿಸಿದ್ದು, ಆ ಸಮಯದಲ್ಲಿ ಚಾಸಾ-2 ರವರ ಬಲಭಾಗದ ಹಣೆಯ ಮೇಲೆ ರಕ್ತಗಾಯವಾಗಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಪೊಲೀಸರು ಎಂಒ-1 ರಿಂದ 7 ನ್ನು ಅಮಾನತುಪಡಿಸಿಕೊಂಡ ನಂತರ ತನಿಖೆ ಸಂಬಂಧವಾಗಿ ಠಾಣೆಗೆ ಕರೆಯಿಸಿಕೊಂಡಿರುವುದಿಲ್ಲ. ಚಾಸಾ-2 ರಿಂದ 6 ರವರ ಜೊತೆ ಸೇರಿ ಎಂಒ-1 ರಿಂದ 7 ನ್ನು ಪೊಲೀಸರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ.

ದಿ:10.05.2020 ರಂದು ಚಾಸಾ-4 ರವರ ಮದುವೆಯಾಗಿರುತ್ತದೆ. ನಾನು, ಚಾಸಾ-2 ರಿಂದ 6 ರವರ ಜೊತೆ ಸೇರಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ-1 ರಿಂದ 6 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ನಮ್ಮ ಕುಟುಂಬದವರ ಜೊತೆ ಸೇರಿ ಸುಳ್ಳು ಪ್ರಕರಣವನ್ನು ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ-5 ಮತ್ತು 6 ರವರು ನಮ್ಮ ವಿರುದ್ಧ ನಡೆದುಕೊಳ್ಳುತ್ತಿದ್ದುದರಿಂದ ಅವರ ವಿರುದ್ದ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಆರೋಪಿಯು ನಮ್ಮ ವಿರುದ್ಧ ದೂರು ನೀಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಮ್ಮಲ್ಲಿರುವ ಕುಟುಂಬದ ಮನಸ್ತಾಪದಿಂದ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸತ್ಯಾಂಶವನ್ನು ಮರೆಮಾಚಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಚಾಸಾ-2 ಮತ್ತು 3 ರವರು ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ 2 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರು.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.

ಎಸ್.ಸಿ.5011/2016 ದಿ:30.10.2024

ಪ್ರಾ.ಸಾ-1

(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ವಕೀಲರಿಂದ</u>**

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ವಕೀಲರು ಗೈರು, ಆರೋಪಿತರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಯಾವುದೇ ಸಮಂಜಸ ಕಾರಣ ನೀಡದಿದ್ದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ</u>** 1 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲಿನಂತೆ ಇರುತ್ತದೆ ಎಂದು ತಿಳಿಸಿ ಅವರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ಎರಡೂ ಪಕ್ಷಗಳವರ ಸಮಕ್ಷಮ ಒಂದು ಸೀಲಾದ ಬಿಳಿ ಬಟ್ಟೆಯ ಚೀಲವನ್ನು ತೆರೆದು ನೋಡಲಾಗಿ ಅದರಲ್ಲಿರುವ ಒಂದು ರಕ್ತಕಲೆಯಾದ ಹಸಿರು ಬಿಳಿ ಬಣ್ಣದ ಶರ್ಟನ್ನು ನೋಡಿ ಗುರುತಿಸಿದ್ದು, ಸದರಿ ರಕ್ತಕಲೆಯಾದ ಹಸಿರು ಬಿಳಿ ಬಣ್ಣದ ಶರ್ಟನ್ನು ಎಂಓ-28 ಎಂದು ಗುರುತಿಸಲಾಯಿತು.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ.5001/2021**

ದಿಃ15.05.2024
ಚಾಸಾ-1 ಪ್ರಾಸಾ-1

ಹೆಸರು :
ತಂದೆಯ ಹೆಸರು :
ವಯಸ್ಸು :
ಉದ್ಯೋಗ :
ವಾಸ :

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

**ಪಾಟೀ ಸವಾಲುಃ ಶ್ರೀ ಇಎಸ್‌ಜಿ ವಕೀಲರಿಂದ ಆರೋಪಿತರ ಪರವಾಗಿ-ಇರುವುದಿಲ್ಲ**.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.

**ಪಾಟೀ ಸವಾಲು:** ಆರೋಪಿತರ ಪರ ವಕೀಲರನ್ನು ಪುಕಾರಿಸಲಾಗಿ ಹಾಜರಿಲ್ಲ. ಆರೋಪಿತರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಂಜಸ ಕಾರಣ ನೀಡದಿದ್ದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

1 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲಿನಂತೆ ಇರುತ್ತದೆಂದು ತಿಳಿಸಿ ಅವರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ಎರಡೂ ಪಕ್ಷಗಳವರ ಸಮಕ್ಷಮ ಒಂದು ಸೀಲಾದ ಬಿಳಿ ಬಟ್ಟೆಯನ್ನು ತೆರೆದು ನೋಡಲಾಗಿ ಅದರಲ್ಲಿರುವ ಒಂದು ರಕ್ತಕಲೆಯಾದ ಬಟ್ಟೆಯನ್ನು ನೋಡಿ ಗುರುತಿಸಿರುತ್ತೇನೆ. ಸದರಿ ರಕ್ತಕಲೆಯಾದ ಹಸಿರು ಬಿಳಿ ಚೌಕುಳಿ ಬಣ್ಣದ ಶರ್ಟನ್ನು ಎಂಓ-28 ಎಂದು ಗುರುತಿಸಲಾಯಿತು.